

ಹಾಸನ ತಾಲ್ಲೂಕಿನ ತಾಲೂಕಿನ ಕಬಳ್ಳಿ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೋಮನಹಳ್ಳಿಯ ಕಲ್ಯಾಣಿಯನ್ನು ಪುನಶ್ಚೇತನಗೊಳಿಸುವ ಪ್ರಯತ್ನದಲ್ಲಿ ಗ್ರಾಮಸ್ಥರು

ಗ್ರಾಮ ಪಂಚಾಯ್ತಿಗಳ ಯಶಸ್ಸಿನ ಕಥನ ಇಲ್ಲಿದೆ.

## ನಿಮ್ಮಲಪೆಡುವಿನ ಸ್ವತಂತ್ರ ಗಣತಂತ್ರ!

ಆಂಧ್ರಪ್ರದೇಶದ ನಿಮ್ಮಲಪೆಡು ಹೆಸರಿನ ಹಳ್ಳಿಗೆ ದುಬಾರಿ ವೆಚ್ಚದಲ್ಲಿ ನಿರ್ಮಿಸಲಾದ 20 ಕಿ.ಮೀ. ದೂರದ ಗಟ್ಟಿ ಡಾಂಬರು ರಸ್ತೆಯಿದೆ. ಆದರೆ ಯಾರೂ ಅದನ್ನು ಸಂಚಾರಕ್ಕೆ ಬಳಸುವುದಿಲ್ಲ! ರಸ್ತೆ ಭಾರತದಲ್ಲೇ ಇದ್ದರೂ, ರಸ್ತೆ ಕೊನೆಯಾಗುತ್ತಿದ್ದಂತೆ ದೇಶದ ಸಾರ್ವಭೌಮ ಅಧಿಕಾರ ಕೊನೆಯಾಗಿ ಹಳ್ಳಿಗರ ಸ್ವಯಂ ಕಾನೂನು, ಸಂವಿಧಾನ ಶುರುವಾಗುತ್ತವೆ. ಇಲ್ಲಿನ ಜನರ ಮಾತೇ ಅಂತಿಮ. ವರ್ಷಕ್ಕೆ ಮೂರು ಬೆಳೆ ಬೆಳೆಯುವ ಇಲ್ಲಿನ ರೈತರು ಪ್ರತೀ ಮನೆಯ ಸುತ್ತ ತರಕಾರಿ ತೋಟ ಮಾಡಿಕೊಂಡು ಸಂತೋಷದಿಂದ ಬದುಕುತ್ತಿದ್ದಾರೆ. ಒಮ್ಮೆ ಇವರ ಕೃಷಿ ಆದಾಯ ಎಷ್ಟು ಚೆನ್ನಾಗಿತ್ತೆಂದರೆ, 'ನಿಮ್ಮನ್ನೂ ಸೇರಿದಂತೆ ನಿಮ್ಮ ಇಡೀ ಕಚೇರಿಯ ಎಲ್ಲ ಸಿಬ್ಬಂದಿಗೂ ನಾವೇ ವರ್ಷ ಪೂರ್ತಿ ಊಟ ಹಾಕುತ್ತೇವೆ' ಎಂದು ಜಿಲ್ಲಾಧಿಕಾರಿಗೇ ನೇರವಾಗಿ ಹೇಳಿ ಇಡೀ ದೇಶದ ಗಮನ ಸೆಳೆದಿದ್ದರು. ಇಷ್ಟೊಂದು ಸಮೃದ್ಧಿ ಮತ್ತು ಆತ್ಮವಿಶ್ವಾಸ ಗಳಿಸಲು ಹಳ್ಳಿಯ ಜನ ದಶಕಗಳ ಕಾಲ ಮುಗಿಯದ ಹೋರಾಟ ನಡೆಸಿದ್ದರು.

ನಿಮ್ಮಲಪೆಡು ಗ್ರಾಮದ ನೆಲವನ್ನು ಕಾಲ ಹೆಬ್ಬೆರಳಿನಿಂದ ಮೀಟಿದರೂ ಬಾಕ್ಸೈಟ್ ಅದಿರು ಹೊರಬರುತ್ತಿತ್ತು. ಇದನ್ನರಿತ ಖಾಸಗಿ ಗಣಿ ಕಂಪನಿಯೊಂದು 1988ರಲ್ಲಿ ಆಂಧ್ರಪ್ರದೇಶ ಸರ್ಕಾರದ ಅನುಮತಿ ಪಡೆದುಕೊಂಡು ಬೃಹತ್ ಬುಲ್ಡೋಜರ್‌ಗಳ ಸಮೇತ ನಿಮ್ಮಲಪೆಡುಗೆ ಬಂದೇ ಬಿಟ್ಟಿತು. ನೆಲ ಕೊರೆಯುವ, ಮದ್ದು ಸಿಡಿಸುವ ಯಂತ್ರಗಳು ಹಳ್ಳಿಯ ಮಧ್ಯದಲ್ಲೇ ಓಡಾಡತೊಡಗಿದವು. ನಿಕ್ಕರ್, ಟೀ ಶರ್ಟ್ ತೊಟ್ಟ ಜನ ಹಳ್ಳಿಯ ತುಂಬೆಲ್ಲ ಓಡಾಡಿ ಅಳತೆ ಮಾಡಿಕೊಂಡು, ಪುಸ್ತಕಗಳಲ್ಲಿ ಬರೆದುಕೊಳ್ಳುತ್ತಿದ್ದರು. ಅಷ್ಟರಲ್ಲಿ ಕಂದಾಯ ಅಧಿಕಾರಿಗಳು, 'ನಿಮ್ಮಲ್ಲಿ ಪ್ರತಿಯೊಬ್ಬರಿಗೂ 5000 ರೂಪಾಯಿ ಸಿಗುತ್ತದೆ. ನಿಮ್ಮ ಮನೆಗಳನ್ನು ಖಾಲಿ ಮಾಡಿಕೊಂಡು ಇಲ್ಲಿಂದ ಹೊರಡಿ' ಎಂದರು. ಜನ ಪ್ರತಿಕ್ರಿಯಿಸದಿದ್ದಾಗ ಕಂಪನಿಯ ಮತ್ತಷ್ಟು ಜನ ಬಂದರು. ಕೂಲಿ ಕೆಲಸದವರು ಹಾರೆ, ಗುದ್ದಲಿ, ಸುತ್ತಿಗೆ ಹಿಡಿದು ಡಾಂಬರು ಡಬ್ಬಿಗಳನ್ನು ನೆಲದ ಮೇಲುರುಳಿಸಿ ರಸ್ತೆ ನಿರ್ಮಿಸಲು ಶುರುಮಾಡಿದರು.

ಹಳ್ಳಿಯ ಯಾರೊಬ್ಬರೂ ಅವರೊಂದಿಗೆ ಮಾತಿಗಾಗಲೀ ವಾದಕ್ಕಾಗಲೀ ಇಳಿಯಲಿಲ್ಲ. ಗ್ರಾಮದ ಜನರ ಸಭೆ ಕರೆದು ಒಂದು ಸಾಲಿನ ನಿರ್ಣಯ ತೆಗೆದುಕೊಂಡು, ಅದನ್ನು ರೆವಿನ್ಯೂ ಅಧಿಕಾರಿಗಳಿಗೆ ತಿಳಿಸಿದರು. ಪಂಚಾಯ್ತಿ ಅಧ್ಯಕ್ಷನ ಮಾತು ಕೇಳಿ ಇಡೀ ಜಿಲ್ಲಾಡಳಿತ ಮಾತು ಕಳೆದುಕೊಂಡಿತು. ಆತ, 'ನಾವು ಇಲ್ಲಿಂದ ಹೊರಡುವುದಾದರೆ ಅದು ನಮ್ಮ ಹಳ್ಳಿಯ ಹಳ್ಳ, ಹುಣಸೆ, ಮಾವಿನ ಮರಗಳ ಜೊತೆ ಮಾತ್ರ' ಎಂದಿದ್ದ. ಹಳ್ಳಿಯ ಅಹವಾಲು ಸುಪ್ರೀಂ ಕೋರ್ಟ್‌ನ ಅಂಗಳಕ್ಕೆ ಬಂತು. 1996ರಲ್ಲಿ ತೀರ್ಪು ನೀಡಿದ ನ್ಯಾಯಾಲಯ ಏನೇ ಕೆಲಸ ಮಾಡುವುದಿದ್ದರೂ ಗ್ರಾಮಸಭೆಯ ಒಪ್ಪಿಗೆ ಇರಲೇಬೇಕು ಎಂದು ಘೋಷಿಸಿತು. ಹಳ್ಳಿಯ ಜನ ಗಣಿ ಕಂಪನಿಗೆ ಪರವಾನಗಿ ನೀಡಲಿಲ್ಲ. 250 ಕೋಟಿ ರೂಪಾಯಿ ಬಂಡವಾಳ ಹೂಡಿದ್ದ ಕಂಪನಿ ಅಲ್ಲಿಂದ ಕಾಲ್ಕಿತ್ತಿತು. ಪ್ರಕೃತಿಯೊಂದಿಗೆ ನಿಂತ ನಿಮ್ಮಲಪೆಡು ತನ್ನ ಸಾರ್ವಭೌಮತೆಯನ್ನು ಎತ್ತಿ ಹಿಡಿಯಿತು. ಅಂದಿನಿಂದ ಇಂದಿನವರೆಗೆ ನಿಮಲಪೆಡು ಗ್ರಾಮಕ್ಕೆ ಒಬ್ಬೇ ಒಬ್ಬ ಸರ್ಕಾರಿ ಅಧಿಕಾರಿಯೂ ಕಾಲಿಟ್ಟಿಲ್ಲ.

ಹಳ್ಳಿಗರಿಗೆ ಕಾನೂನು ನೆರವು, ತಿಳಿವಳಿಕೆ ನೀಡಿ ಸುಪ್ರೀಂಕೋರ್ಟ್‌ನಲ್ಲಿ ದಾವೆ ಹೂಡಿದ 'ಸಮತಾ ಸಂಸ್ಥೆ' ಬುಡಕಟ್ಟು ಜನರ ಹಕ್ಕುಗಳನ್ನು ಮನವರಿಕೆ ಮಾಡಿಕೊಟ್ಟದ್ದಲ್ಲದೆ ಅವರ ಕೇಸನ್ನೂ ಗೆದ್ದುಕೊಟ್ಟಿತು. ತಮಗೆ ಸಿಕ್ಕ ತೀರ್ಪನ್ನು ಹಳ್ಳಿಗರು 'ಸಮತಾತೀರ್ಪು' ಎಂದೇ ಕರೆಯುತ್ತಾರೆ. 'ಇದುವರೆಗಿನ ಕಾನೂನು ಹೋರಾಟದಲ್ಲಿ ನಾವು ಕಲಿತ ದೊಡ್ಡ ಪಾಠ, ನಮ್ಮನ್ನು ನಾವು ಆಳಿಕೊಳ್ಳುವುದು ಎಂಬುದು. ಕಂಪನಿ ನಿರ್ಮಿಸಿದ ರಸ್ತೆಯನ್ನು ನಾವು ಯಾವ ಕಾರಣಕ್ಕೂ ಓಡಾಟಕ್ಕೆ ಬಳಸುವುದಿಲ್ಲ, ತೆನೆಯಿಂದ ಭತ್ತ ಬೇರ್ಪಡಿಸಿ ಒಣಗಿಸುವುದಕ್ಕೆ ಬಳಸುತ್ತೇವೆ' ಎಂದಿರುವ ಗ್ರಾಮಸ್ಥರು, ಸಮೀಪದ ಹಳ್ಳದ ನೀರನ್ನು